ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 17 ನೇ ಮಾರ್ಚ್, 2020

ಮಡಿಕೇರಿ ನಗರದ ರಾಜಾಸೀಟ್‌ನಲ್ಲಿರುವ ಪುಟಾಣಿ ರೈಲು ಸ್ಥಗಿತಗೊಂಡಿರುವ ಬಗ್ಗೆ

ಶ್ರೀ ಸುನೀಲ್ ಸುಬ್ರಮಣಿ ಎಂ. ಪಿ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

159 (1143) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಡಗು ಜಿಲ್ಲೆ ಮಡಿಕೇರಿ ನಗರದ ರಾಜಾಸೀಟ್‌ನಲ್ಲಿರುವ ಮಕ್ಕಳ ರೈಲು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದು ಎಷ್ಟು ದಿನಗಳಿಂದ ಸ್ಥಗಿತಗೊಂಡಿದೆ ; ಇದಕ್ಕೆ ಕಾರಣಗಳೇನು ;

(ಆ) ಈ ಪುಟಾಣಿ ರೈಲನ್ನು ಮತ್ತೆ ಓಡಿಸಲು ನಗರಸಭೆ ಕೈಗೊಂಡ ಕ್ರಮಗಳೇನು; ಫೆಬ್ರವರಿ-2020ರ ಅಂತ್ಯಕ್ಕೆ ಆಗಿರುವ ಪ್ರಗತಿಯ ವಿವರಗಳನ್ನು ನೀಡುವುದು;

(ಇ) ಹೊಸ ರೈಲನ್ನು ಸ್ಥಾಪಿಸಲಾಗುವುದೆ ; ಹಾಗಿದ್ದಲ್ಲಿ, ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡುವುದು ; ಈ ರೈಲನ್ನು ಯಾವ ಕಾಲಮಿತಿಯೊಳಗೆ ಪುನರಾರಂಭಿಸಲಾಗುವುದು ? (ವಿವರ ನೀಡುವುದು)